ಒರ್‌ಹಾನ್ ಪಾಮುಕ್ (1952–) ಇಸ್ತಾಂಬುಲ್‌ನ (ಟರ್ಕಿ) ಪ್ರಮುಖ ಕಾದಂಬರಿಕಾರ, ಚಿಂತಕ. 2006ರಲ್ಲಿ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿ ಪಡೆದಿರುವ ಪಾಮುಕ್, ಟರ್ಕಿಶ್ ಭಾಷೆಗೆ ಮೊಟ್ಟ ಮೊದಲ ನೊಬೆಲ್ ತಂದುಕೊಟ್ಟವ. ಸೈಲೆಂಟ್ ಹೌಸ್, ದ ಬ್ಲಾಕ್ ಬುಕ್, ದ ನ್ಯೂ ಲೈಫ್, ಸ್ನೋ, ಮೈ ನೇಮ್ ಈಸ್ ರೆಡ್, ದ ಮ್ಯೂಸಿಯಂ ಆಫ್ ಇನೊಸೆನ್ಸ್ ಇತ್ಯಾದಿ ಇವನ ಪ್ರಮುಖ ಕಾದಂಬರಿಗಳು. ಬರವಣಿಗೆಯೇ 'ಧರ್ಮ' ಎಂದು ನಂಬಿ ಬದುಕುತ್ತಿರುವ, ಬರೆಯುತ್ತಿರುವ ಒರ್‌ಹಾನ್ ಪಾಮುಕ್‌ನಂತಹ ಬರಹಗಾರರು ಒಂದು ನಾಡಿನ, ಒಂದು ಕಾಲಘಟ್ಟದ ಚಿಂತನಾಕ್ರಮವನ್ನು ಹೇಗೆ ರೂಪಿಸುತ್ತಾರೆ ಎಂಬುದಕ್ಕೆ ಅವನ ಪ್ರತಿಯೊಂದು ಕೃತಿಯೂ ಉದಾಹರಣೆಯಂತಿವೆ. ಇದಕ್ಕೆ ಹೊಸ ಸೇರ್ಪಡೆ 'ದ ರೆಡ್ ಹೇರ್ಡ್ ವುಮನ್'

ಒಂದು ಕ್ಷಣ ಮೈಮರೆಯುವಂತೆ ಮಾಡುವ ಮೋಹಕತೆ ಮತ್ತು ನಿಗೂಢತೆ ಒರ್‌ಹಾನ್ ಪಾಮುಕ್‌ನ ಹೊಸ ಕಾದಂಬರಿ 'ಕೆಂಪುಮುಡಿಯ ಹೆಣ್ಣು' (ದ ರೆಡ್ ಹೇರ್ಡ್ ವುಮನ್)ನದ್ದು. 1980ರ ದಶಕದಲ್ಲಿ ನಡೆದ ಒಂದು ಘಟನೆ: ಯಾವುದೋ ನಾಟಕ ತಂಡದ ಒಂದಷ್ಟು ಜನ ಊಟ ಮಾಡುತ್ತ, ಕುಡಿಯುತ್ತ ಕುಳಿತಿದ್ದ ಟೇಬಲ್‌ಗೆ ಕೆಂಪುಮುಡಿಯ ಹೆಣ್ಣೊಬ್ಬಳು ಬರುತ್ತಾಳೆ. ಆ ಗುಂಪಿನಲ್ಲಿ ಒಬ್ಬರು ಈಗಾಗಲೇ ತಮ್ಮೊಂದಿಗಿರುವ ಇನ್ನೊಬ್ಬ ಕೆಂಪುಮುಡಿಯ ಹೆಣ್ಣನ್ನು ನೋಡುತ್ತ, 'ಅಯ್ಯೋ ಒಂದೇ ಟೇಬಲ್‌ನಲ್ಲಿ ಇಬ್ಬರು ಕೆಂಪು ತಲೆಯವರು! ಇದೇನು ಅದೃಷ್ಟದ ಸಂಕೇತವೋ ಅಥವಾ ಅನರ್ಥವೋ...' ಎನ್ನುತ್ತಾರೆ. ಆಗಷ್ಟೆ ಬಂದ ಕೆಂಪುಮುಡಿಯ ಹೆಣ್ಣು ತಕ್ಷಣವೇ, 'ನನ್ನದು ಸಹಜ ಕೆಂಪುಕೂದಲು' ಎಂದು ಸ್ವಲ್ಪ ಪಶ್ಚಾತ್ತಾಪದಿಂದಲೂ, ಒಂದಿಷ್ಟು ಹೆಮ್ಮೆಯಿಂದಲೂ ಹೇಳುತ್ತಾಳೆ. ಅಲ್ಲಿದ್ದ ಎಲ್ಲರೂ ಮತ್ತೊಬ್ಬಳತ್ತ ತಿರುಗಿ, ಅವಳ ಉತ್ತರಕ್ಕಾಗಿ ಕುತೂಹಲದಿಂದ ಎದುರುನೋಡುತ್ತಾರೆ. ಆಗ ಅವಳು, 'ನೀನು ಕೆಂಪುಮುಡಿಯ ಜೊತೆಗೇ ಹುಟ್ಟಿರಬಹುದು, ಆದರೆ ನನಗೆ ಕೆಂಪುಮುಡಿ ನನ್ನದೇ ಆಯ್ಕೆ' ಎನ್ನುತ್ತಾಳೆ. ಆನಂತರ ಅವಳು, 'ಒಂದು ವೇಳೆ ಆಗ ನಾನು ಸುಮ್ಮನಾಗಿಬಿಟ್ಟಿದ್ದರೆ ನನ್ನ ಕೂದಲಿನ ಬಣ್ಣ ನಕಲಿಯದ್ದು ಎಂದು ಆಮೇಲೆ ಪಶ್ಚಾತ್ತಾಪ ಪಡುವಂತಾಗುತ್ತಿತ್ತು, ಅದು ನನ್ನ ನಡತೆಯ ಬಗ್ಗೆ ಎತ್ತಿದ ಬೆರಳಿಗೆ ನಿರುತ್ತರವಾದಂತೆಯೂ ಆಗುತ್ತಿತ್ತು. ಆದರೆ ಈಗ